**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.943/2024**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 299 ರಡಿಯಲ್ಲಿ ಸಾಕ್ಷಿ ವಿಚಾರಣೆ**

**CW- 1** **PW:1**

| | | |
|---|---|---|
| ಸಾಕ್ಷಿಯ ಹೆಸರು | ಃ | ಮೋಹನ ಏಳಮಗ್ಗದ |
| ತಂದೆ /ಗಂಡನ ಹೆಸರು | ಃ | ಫಕ್ಕಿರಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ನಿವೃತ್ತ ನೌಕರ |
| ವಾಸಸ್ಥಳ | ಃ | ಗಿರಿನಗರ, ಹುಬ್ಬಳ್ಳಿ |

ದಿಃ **17.04.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಪತ್ರಿಕೆಯಲ್ಲಿ ನಿಸರ್ಗ ಲೆಯೋಟ್ ಡೆವಲಪಮೆಂಟ್ಸ ಇವರು ಸೈಟಗಳ ಮಾರಾಟದ ಬಗ್ಗೆ ಜಾಹಿರಾತು ಪ್ರಕಟಿಸಿದ್ದನ್ನು ನೋಡಿ ನಾನು ಸೈಟ್ ಖರೀದಿ ಮಾಡಬೇಕು ಅಂತಾ ಅವರ ಕಚೇರಿಗೆ ಹೋದೆ. ಅಲ್ಲಿ ನಾಗರಾಜ ಶಾವಿ ಹಾಗೂ ಮಲ್ಲಿಕಾರ್ಜುನ ಸರವಿ ಅಂತಾ ಇದ್ದರು. ನಿಸರ್ಗ ಸಿಲ್ವರ್ ಟೌನ ಎಂಬ ಲೆಯೊಟ್ ಮಾಡುತ್ತಿದ್ದು ಅಲ್ಲಿ ನಿವೇಶನ ತೆಗೆದುಕೊಳ್ಳಬಹುದು ಅಂತಾ ಹೇಳಿದರು. ಇದಾದ ನಂತರ ಅವರ ಮತ್ತು ನನ್ನ ಮದ್ಯೆ ಅಗ್ರಿಮೆಂಟ ಆಯಿತು ಪ್ರತಿಶತ ರೂ 40 ರಷ್ಟು ಹಣ ಕೊಡಬೇಕು ಅಂತಾ ಹೇಳಿದರು. ನಾನು ಖರೀದಿ ಮಾಡಬೇಕಾದ ನಿವೇಶನ ಸಂಖ್ಯೆ 75 ಬ್ಲಾಕ್ ನಂ.16/1 ಸಿ/1 ಅಂತಾ ಇರುತ್ತದೆ. ದಿಃ 30.09.2012 ರಂದು ಅಗ್ರಿಮೆಂಟ ಆಯಿತು. ಆಗ ಮುಂಗಡ ಅಂತಾ ರೂ 5 ಸಾವಿರ ಹಣ ಕೊಟ್ಟೆ. ರೂ 7,80,000/- ಕ್ಕೆ ಅಗ್ರಿಮೆಂಟ ಆಗಿತ್ತು. ನಿವೇಶನದ ಅಳತೆ 1200 ಚದರ ಅಡಿ. ನನ್ನ ಹೆಂಡತಿಯಾದ ಶ್ರೀಮತಿ ಸುಜಾತ ಇವರ ಹೆಸರಿನಲ್ಲಿ ಅಗ್ರಿಮೆಂಟ ಮಾಡಿಕೊಂಡೆ. ದಿಃ 11.10.2012 ರಂದು ರೂ 44 ಸಾವಿರ ಹಣವನ್ನು ನೀಡಿದೆ. ದಿಃ 04.11.2012 ರಂದು ರೂ 2,63,000/- ಹಣ ನೀಡಿದೆ. ಒಟ್ಟು ರೂ 3,12,000/- ಹಣವನ್ನು 2012 ರಲ್ಲಿ ನೀಡಿರುತ್ತೇನೆ. ಹಣ ಕೊಟ್ಟಿದ್ದಕ್ಕೆ ರಶೀದಿ

ನೀಡಿದರು. ಮೇಲಿಂದ ಮೇಲೆ ನಾನು ಅವರ ಕಚೇರಿಗೆ ಬೇಟಿ ಆದಾಗ 2014 ರಲ್ಲಿ ಬಾಕಿ ಹಣ ಕೊಡಬೇಕು ಅಂತಾ ಹೇಳಿದರು. ರೂ 2,20,000/- ಹಣವನ್ನು ದಿಃ 30.06.2014 ರಂದು ನೀಡಿದೆ. ಒಟ್ಟು ರೂ 5,32,000/- ಹಣವನ್ನು ಆರೋಪಿತರಿಗೆ ನೀಡಿದ್ದೇನೆ. ನಂತರ ಹಲವಾರು ಬಾರಿ ಆರೋಪಿತರನ್ನು ಬೇಟಿ ಆಗಿ ನಿವೇಶನವನ್ನು ನಮ್ಮ ಹೆಸರಿಗೆ ಬರೆದುಕೊಡಬೇಕು ಅಂತಾ ಕೇಳಿದಾಗ ಅವರು ದಿನಮೇಕ ಮಾಡುತ್ತಾ ಬಂದರು. ನಂತರ ನಾನು ಅವರಿಗೆ ನಿವೇಶನ ಅಥವಾ ಹಣ ವಾಪಸ್ಸು ಕೊಡಿ ಅಂತಾ ಹಲವಾರು ಬಾರಿ ಕಚೇರಿಗೆ ಹೋಗಿ ಕೇಳಿದೆ. ಅವರು ಕಚೇರಿ ಹತ್ತಿರ ಬರಬೇಡಿ ನಾವು ಕೊಟ್ಟಾಗ ನೀವು ನಿವೇಶನ ತೆಗೆದುಕೊಳ್ಳಬೇಕು ಅಂತಾ ಹೇಳಿದರು. ಇದಾದ ಮೇಲೆ ಅವರು ಬೇಟಿಯಾಗುತ್ತಿರಲಿಲ್ಲ ಮುಖ ತಪ್ಪಿಸಿ ಅಡ್ಡಾಡುತ್ತಿದ್ದರು.

2. 2019 ರಲ್ಲಿ ನಾನು ಆರೋಪಿತರ ಕಚೇರಿಗೆ ಹೋಗಿ ನಿವೇಶನದ ಬಗ್ಗೆ ವಿಚಾರಿಸಿದಾಗ ಸೈಟ ಬೇಕೆಂದರೆ ಕಾಯಬೇಕು ಹಾಗೂ ಹಣ ಬೇಕೆಂದರೆ ಕೊಟ್ಟಾಗ ತೆಗೆದುಕೊಳ್ಳಬೇಕು ಅಂತಾ ಹೇಳಿದರು. ಮತ್ತೊಮ್ಮೆ ಕಚೇರಿಗೆ ಫೋನ್ ಮಾಡಿದಾಗ ಅಲ್ಲಿಯ ಸಿಬ್ಬಂದಿಗಳಿಗೆ ಸೈಟ ಬಗ್ಗೆ ಕೇಳಿದಾಗ ಅವರು ಮುಂದೆ ಕೊಡುತ್ತೇವೆ ಅಂತಾ ಹೇಳಿದರು. ಆಗ ನಾನು ನೀವು ಮೋಸ ಮಾಡಲು ಈ ರೀತಿ ಪ್ರಯತ್ನ ಮಾಡುತ್ತಿದ್ದಿರಿ ಅಂತಾ ಹೇಳಿದೆ. ಅವರು ಹಾಗೆನಿಲ್ಲ ಏನು ಬೇಕಾದರು ಮಾಡಿಕೊಳ್ಳಿ ಅಂತಾ ಹೇಳಿದರು. ನಂತರ ಪೊಲಿಸ್ ಠಾಣೆಗೆ ಹೋಗಿ ಈ ಬಗ್ಗೆ ದೂರು ಕೊಟ್ಟೆ.

**ಈ ಹಂತದಲ್ಲಿ ದೋಷಾರೋಪಾಣಾ ಪಟ್ಟಿ ಸಂಬಂದವಾಗಿ ಆದೇಶ ಮಾಡುವುದು ಅವಶ್ಯಕ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**
**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.